ಶ್ರೀ ಬಿ. ಎಚ್. ಬೋರಣ್ಣಗೌಡರು.—" for .....

ಎಂದೇನಾದರೂ ರಜ ಮಾಡಿಕೊಡಬಹುದೇ!

ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ಸನ್ನಿವೇಶದ ಮೇಲೆ ಹೋಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ರೆವೆನ್ಯೂ ಇನ್ಸ್‌ಪೆಕ್ಟರು ಆಫೀಸಿನಲ್ಲಿಯೇ ಪರ್ಮಿಟ್ ಕೊಡಬೇಕೆಂದು ಹೇಳಿದಿರಿ. ರೆವೆನ್ಯೂ ಇನ್ಸ್‌ಪೆಕ್ಟರಿಗೆ ಬೇರೆ ಆಫೀಸ್ ಇರುತ್ತದೆಯೇ!

ಶ್ರೀ ಟಿ. ಮರಿಯಪ್ಪನವರು.—ಮನೆಯೊಳಗೇ ಒಂದು ರೂಮನ್ನು ಆಫೀಸಾಗಿ ಮಾಡಿಕೊಂಡಿರುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇಲ್ಲಿ ಕೊಟ್ಟಿರುವ ದರಲ್ಲಿ ಶ್ಯಾನುಭೋಗರಾದ ಮೇಲೆ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರವರನ್ನು ತೋರಿಸಿದ್ದೀರಿ ಇದೇನು ಅವರು ಶ್ಯಾನುಭೋಗರಿಗಿಂತ ಕಡಿಮೆ ಅಂತಲೇ!

ಶ್ರೀ ಟಿ. ಮರಿಯಪ್ಪನವರು.—ಅದೇನೂ ಇಲ್ಲ. ಬೀಜದ ಬತ್ತಕ್ಕೆ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರವರು ಪರ್ಮಿಟ್ ಕೊಡುತ್ತಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಹಳ್ಳಿಗಳಿಂದ ರೇಷನ್‌ದವಸವನ್ನು ತರಿಸಿಕೊಂಡಿದ್ದರೂ ಅವರಗಳು ಯಥ ಪ್ರಕಾರ ತಮ್ಮ ರೇಷನ್ನನ್ನು ಡಿಪೋಗಳಲ್ಲಿ ತೆಗೆದುಕೊಳ್ಳುತ್ತಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗೆ ದವಸ ತರಿಸಿಕೊಳ್ಳುವವರು ತಮ್ಮ ರೇಷನ್ ಕಾರ್ಡುಗಳನ್ನು ತೆಗೆದುಕೊಂಡು ಹೋಗಿ, ಡೆಪ್ಯುಟಿ ಕಮೀಷನರವರಿಗೆ ತೋರಿಸಿ ಅವರಿಂದ ಗುರುತು ಮಾಡಿಸಿಕೊಂಡು ಬಂದರೇನೇ ಆ ದವಸ ಅವರಿಗೆ ಕೊಡುವುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅನೇಕ ಹಳ್ಳಿಗಳಲ್ಲಿ ರೈತರು ಒಂದು ಊರಿನಲ್ಲಿ ವಾಸಮಾಡಿಕೊಂಡಿದ್ದು ಪಕ್ಕದ ಊರಿನಿಂದ ತಮ್ಮ ಜಮೀನಿನ ಬೆಳೆಯನ್ನು ಸಾಗಿಸಿಕೊಂಡು ಬರುವುದಕ್ಕೆ ಬಹಳ ಮುಟ್ಟಿಗೆ ಕಷ್ಟವಾಗುವುದು ತಮ್ಮಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಅಷ್ಟು ತೊಂದರೆಯಿದೆಯೆಂದು ಹೇಳಲಾರೆ. ಏಕೆಂದರೆ ಇಂಥ ಸಂದರ್ಭಗಳಲ್ಲಿ, ನಿಬಂಧನೆಗಳನ್ನು ಸಾಧ್ಯವಾದಷ್ಟು ಸಡಿಲಪಡಿಸಿದ್ದೇವೆ. ರೈತರಿಗೆ ಒಂದೂರಿನಿಂದ ಇನ್ನೊಂದೂರಿಗೆ ತಮ್ಮ ದವಸಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅದಷ್ಟು ಮುಟ್ಟಿಗೆ ತೊಂದರೆಯಿರಕೂಡದೆಂಬುದೇ ನಮ್ಮ ಆಸೆ. ಆದರೆ ಬ್ಲಾಕ್ ಮಾರ್ಕೆಟ್ಟಿಗೆ ದವಸ ಹೋಗದಂತೆ ನೋಡಿಕೊಳ್ಳುವುದಕ್ಕೆ ಅವಕಾಶವಾಗಲೆಂದು ಈ ರೀತಿ ಪರ್ಮಿಟ್ ತೆಗೆದು ಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಪ್ರಯಾಣೀಕರು ರೇಷನ್ ಪ್ರದೇಶಕ್ಕೆ ಹೋಗುವಾಗ ಹೊರಗಿನಿಂದ ಹತ್ತು ಸೇರುಗಳಷ್ಟು ದವಸವನ್ನು ತರಬಹುದೆಂದು ಹಿಂದೆ ಅವಕಾಶವಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಹಿಂದೆಯೂ ಇರಲಿಲ್ಲ; ಈಗಲೂ ಇಲ್ಲ. Statutory ration ಪ್ರದೇಶಕ್ಕೆ ಹಾಗೆ ತರುವುದಕ್ಕೆ ಅವಕಾಶವಿಲ್ಲ.

ಶ್ರೀ ಜಿ. ನಾರಾಯಣಗೌಡರು.—Statutory ration ಪ್ರದೇಶಕ್ಕೂ ಹಿಂದೆ ತರಬಹುದೆಂದಿತ್ತಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಯಾವಾಗಲೂ ಇಲ್ಲ. ಪರ್ಮಿಟ್ ಮೂಲಕ ತರಬಹುದಾಗಿತ್ತು, ಅಷ್ಟೆ.

ಶ್ರೀ ಜಿ. ನಾರಾಯಣಗೌಡರು.—ಪ್ರಯಾಣಿಕರು ಸಾಮಾನ್ಯವಾಗಿ ಇಂಥಾ Statutory ration ಪ್ರದೇಶಕ್ಕೆ ಹೋಗುವಾಗ ತಮ್ಮ ಊಟ ಉಪಚಾರಗಳಿಗಾಗಿ ತಮ್ಮ ರೇಷನ್ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಪ್ರಯಾಣೀಕರು ಹೊರ ನಿಂದ ಬಂದ ತಕ್ಷಣ ಅವರಿಗೆ ಹಂಗಾಮಿ ರೇಷನ್ ಕಾರ್ಡುಗಳನ್ನು ಕೊಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಕಾರ್ಡು ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುವುದಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ತೊಂದರೆಯಾಗಕೂಡದೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಒಕಸ್ಮಾತ್ತಾಗಿ 5-6 ಜನಗಳು ಹೀಗೆ ಹೊರಗಿನಿಂದ ಈ ಊರಿಗೆ ಬರಬೇಕೆಂದರೆ, ಅವರು ತಮ್ಮ ಜೊತೆಯಲ್ಲೇ ರೇಷನ್ ತರುವುದು ಕಷ್ಟವಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಹಾಗೆ ಬೇಕಾದರೆ, ಪರ್ಮಿಟ್ ಪಡೆದು ಅವರು ತೆಗೆದುಕೊಂಡು ಹೋಗಬಹುದು.

Sri M. GOVINDA REDDY (Chitaldrug District—General).—May I know if persons who own land in Mysore, but who reside outside, are permitted to transport food-grains, for their own consumption?

Sri T. MARIAPPA.—The question is not very clear. Does the Hon'ble Member mean transporting of food-grains to Madras or Bombay?

Sri M. GOVINDA REDDY.—I mean Madras.

Sri T. MARIAPPA.—There is reciprocity between Madras and Mysore. Madras permits food-grains to be brought into Mysore and from here also we permit food-grains to be taken out to Madras for their consumption.

Sri M. GOVINDA REDDY.—Has it come to the notice of the Hon'ble Food Minister that permits have been refused in such cases when applied for?

Sri T. MARIAPPA.—Such instances have not come to my notice so far. I will take up the matter if they are brought to my notice.

Position of Food Production in the State at the end of February 1950.

*Q.—190. **Janab SYED ABDUR RAHMAN** (Chikmagalur *cum* Shimoga—Muslim).—

Will the Government be pleased to state:—

(*a*) the position of food production in the State at the end of February 1950 in respect of—

(i) stocks available;

(ii) prospects of obtaining food-grains rom the Government of India ;

(*b*) the steps they have taken to step up production of food-grains in the State ?

A.—**Sri T. MARIAPPA** (Home Minister).—

(*a*) (i) Stocks on 1st March 1950—

		Tons
Rice	...	54,579·6
Wheat and Wheat Products	...	8,097·5
Millets	...	9,835·8

(ii) Balance of ceiling quota for 1950 promised by the Government of India.—

Rice and Wheat together	...	*62,056·5

*Out of a total allotment of 75,000 tons.

(*b*) The Member's attention is invited to the Press Notes and Government Orders published in the matter from time to time.

Janab SYED ABDUR RAHMAN.—In answer to sub-clause (ii) of question (*a*), it has been stated that about 62,000 tons are likely to be obtained from the Government of India this year out of the quantity of 75,000 tons allotted. What about the other 13,000 tons ?

Sri T. MARIAPPA.—Out of the quota allotted to us this year, a balance quota of 38,000 tons is yet to be made available.

Janab SYED ABDUR RAHMAN.—Out of a total allotment of 75,000 tons, 62,000 tons have been promised. Are the Government pressing for anything more ?

Sri T. MARIAPPA.—Yes. Not only for 75,000 tons but for something more.

Janab SYED ABDUR RAHMAN.—In the answer, rice and wheat have been shown together. Would it not have been possible to show these two commodities separately ?

Sri T. MARIAPPA.—It is not possible until the Government of India gives the break-up.

Janab SYED ABDUR RAHMAN.—Is it possible to give a larger quantity of wheat now as ration ?

Sri T. MARIAPPA.—The Government of India have been impressing upon the Provincial Governments the need for cutting down the rice quota. Therefore they have been giving more of wheat than rice.

Janab SYED ABDUR RAHMAN.—In that case will the people get a greater quantity of wheat ?

Sri T. MARIAPPA.—It is not possible to say. It all depends on the overall position of the respective commodities.

Janab SYED ABDUR RAHMAN.—Is there any difference in the prices of rice and wheat ?

Sri T. MARIAPPA.—Of course. The prices for wheaat and also for rice are fixed.

Janab SYED ABDUR RAHMAN.—Will the quota of wheat be increased ?

Sri T. MARIAPPA.—The Government of India will intimate to us the break-up of the total allotment as and when they get to know the quantities that are available at their disposal.

Janab SYED ABDUR RAHMAN.—When you get the quota that you require from the Government of India, is there any likelihood of increasing the rations from nine to twelve ounces ?

Sri T. MARIAPPA.—Even with the existing scale of rations, the allotment of 75,000 tons is inadequate. That is is why we are pressing on the Government of India that more foodgrains should be allotted, that is about thirty to forty thousand tons more.

Janab SYED ABDUR RAHMAN.—Was it not convenient to supply copies of the press notes and Government orders to the members of the House ?

Sri T. MARIAPPA.—Hon'ble Member's question was vague. There are a number of Government Orders. I think when once they are in the form of Government Orders, there is no need to answer everything in detail.

Janab SYED ABDUR RAHMAN.—Is it not necessary that the Members should have information ready on hand ?

Sri T. MARIAPPA.—I will shortly place a note in the hands of Hon'ble Members.

Sri M. GOVINDA REDDY (Chitaldrug District-General).—With reference to the answer that 9,835·8 tons represent the position of millets as on

1st March 1950, do the Government consider that this quantity will meet the requiremen s of the State?

Sri T. MARIAPPA.—No. Further allotment has to come.

Sri M. GOVINDA REDDY.—Has it come to the notice of the Government that millets are not being supplied now in Bangalore?

Sri T. MARIAPPA.—We are supplying millets. But the point is the procurement of millets has just begun and the Government of India have been asking us to take only wheat. Even they are unable to supply millets.

Sri M. GOVINDA REDDY.—May I know whether the stock of millets in Bangalore is sufficient to meet the requirements of the City?

Sri T. MARIAPPA.—I think so for the present.

Sri M. GOVINDA REDDY.—But my inf rmation is that millets are not being issued in the City now for the last one week?

Sri T. MARIAPPA.—No. We are issuing millets in the sense we are issuing rice, wheat and to the extent available, ragi.

Sri M. GOVINDA REDDY.—Is it a fact that the Government are exchanging our millets with paddy outside, Madras for instance?

Sri T. MARIAPPA.—No, not with Madras.

Sri M. GOVINDA REDDY.—Have the Government any idea of exchanging millets for paddy from any other place?

Sri T. MARIAPPA.—There is a proposal to exchange ragi for paddy in Coorg. It has not materialised.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಿಲೆಟ್ಸ್ ಎಂದು ಹೇಳುವುದರಲ್ಲಿ ರಾಗಿ, ಜೋಳ, ನವಣೆ, ಹಾರಕ ಮುಂತಾದ್ದು, ಎಷ್ಟಿವೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ರಾಗಿ 1-3-50ರವರೆಗೆ ಶೇಖರಿಸಿರುವುದೆಷ್ಟೆಂದು ಲೆಕ್ಕ ಮಾಡಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಲೆಕ್ಕ ತಯಾರಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ರಾಗಿ ಎಷ್ಟು ಶೇಖರಣೆಯಾಗಬಹುದೆಂದು ತಾವು ಅಂದಾಜು ಮಾಡಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ಈಗಾಗಲೇ 182,776 ಪಲ್ಲ ರಾಗಿ ಶೇಖರಿಸಲ್ಪಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಟಿಕ್ ಲೆಕ್ಕ ಕೊಟ್ಟಿದ್ದೀರಿ. ಪಲ್ಲ ಇಷ್ಟು ಎಂದು ಏಕೆ ಹೇಳಬಾರದು?

ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರಕ್ಕೆ ಟಿಕ್ ಲೆಕ್ಕದಲ್ಲೇ ತಿಳಿಸಬೇಕಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಒಂದು ಟಿಕ್‌ಗೆ ಎಷ್ಟು ಪಲ್ಲ ಆಗುತ್ತದೆ?

ಶ್ರೀ ಟಿ. ಮರಿಯಪ್ಪನವರು.—ಹತ್ತು ಪಲ್ಲಾಕ್ಕೆ ಒಂದು ಟಿಕ್ ಎಂದು ಹೆಚ್ಚು ಕಡಿಮೆ ಅಗಿ ತಿಳಿದುಕೊಳ್ಳಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಇನ್ನುಮೇಲೆ ಪಲ್ಲ ಲೆಕ್ಕದಲ್ಲೇ ತಿಳಿಸುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ತಿಳಿಸುತ್ತೇವೆ. ಆದರೆ ಮೈಸೂರಿನಿಂದ ಇಂಡಿಯಾ ಸರ್ಕಾರಕ್ಕೆ ಟಿಕ್ ಲೆಕ್ಕದಲ್ಲಿ ತಿಳಿಸಬೇಕು.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಬತ್ತ ದಾಸ್ತಾನಿನಲ್ಲಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಇದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ವಸೂಲಾಗಿರುವುದೂ ಲೆಕ್ಕಕ್ಕೆ ಸೇರಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಸೇರಿದೆ.

ಶ್ರೀ ಬಿ. ಹುಚ್ಚೇಗೌಡರು.—ರಾಗಿ ಮಿಲೆಟ್ಸ್‌ನಲ್ಲಿ ಸೇರಿದೆಯೆ?

ಶ್ರೀ ಟಿ. ಮರಿಯಪ್ಪನವರು. ಉತ್ತರದಲ್ಲಿ ಕೊಟ್ಟಿರುವ ಪ್ರಕಾರ 1-3-50ವರೆಗೆ ನಾವು ಶೇಖರಿಸಿರುವುದು, ಹೊರಗಿನಿಂದ ಬಂದಿರುವುದು, ಮಲೆನಾಡಿನಿಂದ ಬಂದಿರುವುದು—ಎಲ್ಲಾ ಸೇರಿದೆ.

ಶ್ರೀ ಬಿ. ಹುಚ್ಚೇಗೌಡರು.—(*b*) ಪ್ರಶ್ನೆಯಲ್ಲಿ ಕೇಳಿರುವುದಕ್ಕೆ ತೆಗೆದುಕೊಂಡಿರುವ ಕಾರ್ಯಕ್ರಮವೇನು?

ಶ್ರೀ ಟಿ. ಮರಿಯಪ್ಪನವರು.—ಕೆರೆ ಕಟ್ಟೆಗಳ ರಿಪೇರಿ, ನಾಲೆಗಳ ದುರಸ್ತು, 52 ದೊಡ್ಡ ಕೆರೆಗಳ ಪೈಕಿ 17 ಕೆರೆಗಳ ಕೆಲಸವನ್ನು ಪೂರೈಸುವುದು ಮತ್ತು 18 ಸಾವಿರ ಎಕರೆ ತರಿ ವ್ಯವಸಾಯಕ್ಕೆ ಬರುವಂತೆ ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ಗೊತ್ತುಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಕಳೆದ ವರ್ಷಕ್ಕಿಂತ ಈ ವರ್ಷ ಎಷ್ಟು ಎಕರೆ ಹೆಚ್ಚಾಗಿ ಸಾಗಾಗಿದೆ?

ಶ್ರೀ ಟಿ. ಮರಿಯಪ್ಪನವರು.—ಆ ಅಂಕಿ ಅಂಶಗಳಿಲ್ಲ. ಸರ್ಕಾರದ ಕಾರ್ಯಕ್ರಮದ ಫಲವಾಗಿ ಈ ವರ್ಷವೂ ಸಾಗಾಗುತ್ತಿದೆ. ಹೋದ ವರ್ಷ 1 ಲಕ್ಷ 31 ಸಾವಿರ ಟಿಕ್ ಇಂಡಿಯಾ ಸರ್ಕಾರದವರು ಕೊಟ್ಟರು. ಈ ವರ್ಷ 1 ಲಕ್ಷ 10 ಸಾವಿರ ಟಿಕ್ ಕೊಟ್ಟರೂ ಸಾಸು, ನಿಭಾಯಿಸಿಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ರೇಷ್ಮೆ ಕಡಮೆ ಮಾಡಿ ಕಡಮೆ ಖೋತಾ ಬೀಳುವುದನ್ನು ಸರಿದೂಗಿಸುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಹೋದ ವರ್ಷದ ರೇಷ್ಮೆನಷ್ಟವನ್ನೇ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕಳೆದ ವರ್ಷಕ್ಕಿಂತ ಈ ವರ್ಷ ಸಾಗು ಆಗುವ ವಿಸ್ತೀರ್ಣ ಹೆಚ್ಚಾಗಿದೆಯೇ ಅಥವಾ ಕಡಮೆಯಾಗಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಕಡೆ ಹೆಚ್ಚಿದೆ; ಮತ್ತೆ ಕೆಲವು ಕಡೆ ಕಡಿಮೆಯಾಗಿದೆ. ಮಳೆ ಹೆಚ್ಚಾಗಿರುವ ಕಡೆ ಹೆಚ್ಚಿದೆ, ಮಳೆ ಇಲ್ಲದಿರುವ ಕಡೆ ಕಡಮೆಯಾಗಿದೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯಿಂದ

ಹೋದ ವರ್ಷ ಎಷ್ಟು ಹೆಚ್ಚಾಯಿತೆಂದು ಹೇಳುವುದಕ್ಕೆ ಸಾಧ್ಯವೆ ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಹೆಚ್ಚು ಆಹಾರ ಬೆಳೆಯುವ ಯೋಜನೆಯಿಂದ ಪ್ರಯೋಜನವಿದೆ ತಾನೆ ?

ಶ್ರೀ ಟಿ. ಮರಿಯಪ್ಪನವರು,—ಖಂಡಿತ ಇದೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಅದಕ್ಕೆ ಅಂಕಿ ಅಂಶಗಳನ್ನು ಕೊಡಬಲ್ಲಿರಾ ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ವಿವರವಾಗಿ ಶೇಖರಿಸುವುದಕ್ಕೆ ಬೇರೆ ಶಾಖೆ ಇಲ್ಲ. The overall picture is satisfactory.

ಶ್ರೀ ಟಿ. ಸುಬ್ರಹ್ಮಣ್ಯರವರು.—ಎಕ್ಸ್‌ಟೆನ್ಸಿವ್ ಕಲ್ಟಿವೇಷ್ಷನ್ ಹೆಚ್ಚು ಮಾಡುವುದಕ್ಕಿಂತ ಇಂಟೆನ್ಸಿವ್ ಕಲ್ಟಿವೇಷ್ಷನ್ ಹೆಚ್ಚು ಮಾಡುವುದು. ಒಳ್ಳೆಯದಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ನಾವಾಗಲೇ ಆರೀತಿ ಮಾಡಿ, ಫ್ರೋತ್ಸಾಹ ನೀಡಿ ನೀರು ನರಬರಾಯಿಗೂ ಹೆಚ್ಚು ಅವಕಾಶ ಮಾಡುತ್ತಿದ್ದೇವೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—Mofussil ಭಾಗದಲ್ಲಿ ಕೊಡುತ್ತಿರುವ ರೇಷ್ಷ ಬಹಳ ಕಡಮೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪ ಕಡಮೆಯಿದೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಅದರಿಂದ ಕಾಳಸಂತೆ ಪ್ರಾರಂಭವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಸರ್ಕಾರದ ಗಮನಕ್ಕೆ ಬಂದಿಲ್ಲ. ಆಲ್ಲಲ್ಲಿ ಬೆಳೆಯದವರೂ ಕಡಮೆ. ಅಲ್ಲಲ್ಲಿ ಅಲ್ಪ ಸ್ವಲ್ಪ ಬೆಳೆಸಾಡುವವರೂ ಇದ್ದಾರೆ. ಅಂಥವರಿಗೆ ಅವರ ಕಾಲಾವಧಿ ಮುಗಿದಮೇಲೆ ಅವರಿಗೂ ರೇಷ್ಷ ಕೊಡುತ್ತೇವೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಅವರಿಗೆ ಎರಡು ಹೊತ್ತು ಹೊಟ್ಟೆ ತುಂಬುವಷ್ಟು ಆಗುವಷ್ಟು ಕೊಡುತ್ತಿಲ್ಲವೆಂಬುದು ಸರ್ಕಾರದ ಗಮನದಲ್ಲಿಯೆದೆಯೇ ?

ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯರವರು.—Mofussil ಕಡೆಗಳಲ್ಲಿ ವಾರಕ್ಕೆ 4 ಆಣೆ, 8ಆಣೆ ರೇಷ್ಷ ಕೊಡುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಟಿ. ಸುಬ್ರಹ್ಮಣ್ಯರವರು —ವಾರಕ್ಕೆ 4 ಆಣೆ, 8 ಆಣೆಯಷ್ಟು ಕೊಡುತ್ತಿರುವುದನ್ನು ಬದಲಾಯಿಸುವುದಕ್ಕೆ ಸಾಧ್ಯವೆ ?

ಶ್ರೀ ಟಿ. ಮರಿಯಪ್ಪನವರು.—ಸಾಧ್ಯವಾದಷ್ಟು ನೋಡಿ ಸಾಕಾದಷ್ಟು ಕೊಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಟಿ. ಸುಬ್ರಹ್ಮಣ್ಯರವರು.—Mofussil ಭಾಗಗಳಲ್ಲಿ ಸಾಕಾದಷ್ಟು 2 ವರ್ಷಗಳಿಂದ ಕೊಡುತ್ತಿಲ್ಲವೆಂದು ಗೊತ್ತಾದರೆ ಬೇರೆರೀತಿಯಲ್ಲಿ ಅವರಿಗೆ ಒದಗಿಸಲು ಅವಕಾಶ ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—4 ಆಣೆ, 8 ಆಣೆ ರೇಷ್ಷ ಮಾತ್ರ ಕೊಡುತ್ತಿದ್ದಾರೆಂದು ಹೇಳಿದರೆ ವಿಚಾರ ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ವಿಚಾರ ಮಾಡುತ್ತೇವೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—Mofussil ಭಾಗಗಳಲ್ಲಿ ಜನರಿಗೆ ತೊಂದರೆಯಿರುವುದರಿಂದ ದವಸದ ಶೇಖರಣೆಯಾವ ಮೇಲೆ ಅವರು ಎಲ್ಲಿಂದ ಬೇಕಾದರೂ ಧಾನ್ಯವನ್ನು ತರುವುದಕ್ಕೆ ಅವಕಾಶ ಕೊಡುತ್ತೀರಾ ?

Sri T. MARIAPPA.—Sir, that is a very dangerous proposition which I am not prepared to concede just at present.

ಶ್ರೀ ಎಂ. ಎಕ್. ಜೋಯಿಸ್‌ರವರು (ಮೈಸೂರು ಜಿಲ್ಲೆ).—ಬತ್ತಕ್ಕೆ ರಾಗಿಯನ್ನು ಬದಲಾವಣೆ ಮಾಡಿಕೊಳ್ಳುವುದು ಯಾವ ಪ್ರಮಾಣದಲ್ಲಿ ?

ಶ್ರೀ ಟಿ. ವರಿಯಪ್ಪನವರು.—ಒಂದು ಪಲ್ಲಾ ರಾಗಿಗೆ ಮೂರು ಪಲ್ಲಾ ಬತ್ತ ಎಂದಿತ್ತು. ಆದರೆ ಇದು ಅಷ್ಟು ಜನರಿಗೆ ಆಕರ್ಷಣೆ ಆಗಲಲ್ಲ. ಈಗ ಒಂದು ಪಲ್ಲಾ ರಾಗಿಗೆ 325 ಸೇರು ಬತ್ತ ಕೊಡಬಹುದೆಂದು ಗೊತ್ತು ಮಾಡಿದ್ದೇವೆ.

ಶ್ರೀ ಎಂ. ಎಕ್. ಜೋಯಿಸ್‌ರವರು.—ಹಿಂದೆ ಕೊಡಗಿನಿಂದ ತರಿಸಿದ ಒಂದು ಪಲ್ಲಾ ರಾಗಿಗೆ ಎಷ್ಟು ಪಲ್ಲ ಬತ್ತದಂತೆ ಬದಲಾವಣೆ ಮಾಡಿಕೊಂಡಿದ್ದೀರಿ ?

ಶ್ರೀ ಟಿ. ಮರಿಯಪ್ಪನವರು —ಒಂದು ಪಲ್ಲಾ ರಾಗಿಗೆ ಎರಡೂವರೆ ಪಲ್ಲಾ ಬತ್ತದಂತೆ.

ಶ್ರೀ ಎಂ. ಎಕ್. ಜೋಯಿಸ್‌ರವರು.—ನಮ್ಮ ದೇಶದಲ್ಲಿ ಜನರಲ್ಲಿ ರಾಗಿ ಬೇಕಾದಷ್ಟಿರುವುದರಿಂದ ರಾಗಿ ಹೊರಗೆ ಕಳುಹಿಸಿ ಅದಕ್ಕೆ ಬದಲು ಬತ್ತ ಕಳುಹಿಸಿಕೊಡಿಯೆಂದು ಹೇಳಿದ್ದೀರಾ ?

ಶ್ರೀ ಟಿ. ಮರಿಯಪ್ಪನವರು.—ನಮ್ಮ ದೇಶದಲ್ಲಿ ಬತ್ತದ ಕೊರತೆಯಿದೆ, ಅದನ್ನು ಆದಷ್ಟು ಮಟ್ಟಿಗೆ ಸರಿಪಡಿಸಿಕೊಡಬೇಕೆಂದು ತಿಳಿಸಿದ್ದೇವೆ. ಇಂಡಿಯಾ ಸರ್ಕಾರದವರು 50,000 ಟಿ ದವಸವನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಎಂ. ಎಕ್. ಜೋಯಿಸ್‌ರವರು.—ರಾಗಿ ಬೆಳೆ ನಮ್ಮ ದೇಶದಲ್ಲಿ ಹೇಗಿದೆ ?

ಶ್ರೀ ಟಿ. ಮರಿಯಪ್ಪನವರು.—ತೃಪ್ತಿಕರವಾಗಿದೆ.

ಶ್ರೀ ಎಂ. ಎಕ್. ಜೋಯಿಸ್‌ರವರು.—ಆಗ ನಮ್ಮಲ್ಲಿ ಎಷ್ಟಿದೆಯೋ ಅಷ್ಟು ನಮಗೆ ಸಾಕಾಗಿ ಸ್ವಲ್ಪ ಹೆಚ್ಚಿಗೆ ಆಗಬಹುದು. ಅದನ್ನೀಗ ಕೊಟ್ಟು ಬಿಟ್ಟರೆ ಮುಂದೇನು ಮಾಡುತ್ತೀರಿ ? ರಾಗಿ ಹೆಚ್ಚು ಕಾಲ ಕೆಡದೇ ಇರುವುದಿಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ಮುಂದಿನ ವರ್ಷದ overall picture ನೋಡಿದರೆ ನಮ್ಮಲ್ಲಿ ಜನವರಿಗೇ ಏನೂ ದಾಸ್ತಾನಿರುವುದಿಲ್ಲ.

ಶ್ರೀ ಎಂ. ಎಕ್. ಜೋಯಿಸ್‌ರವರು.—ಹಿಂದಿನ ವರ್ಷ ರಾಗಿಗೆ ಹೆಚ್ಚಿಗೆ demand ಇರಲಿಲ್ಲವೇ ?

ಶ್ರೀ ಟಿ. ಮರಿಯಪ್ಪನವರು.—ಆದರೂ ಕೊಡಗಿನವರು ರಾಗಿ ತೆಗೆದುಕೊಳ್ಳುವುದಕ್ಕೆ ಒಪ್ಪುವುದಿಲ್ಲ. 20,000 ಪಲ್ಲಾ ರಾಗಿ ತೆಗೆದುಕೊಂಡು 50,000 ಪಲ್ಲ ಬತ್ತ ಕೊಡಿ ಎಂದು ಹೇಳುತ್ತಿದ್ದೇವೆ.

Sri D. H. CHANDRASEKHARAIYA (Chitaldrug District—General).—Will it not help the public to have all the Press Notes and Government Orders on food production published in a consolidated form ?

Sri T. MARIAPPA.—We are going to do it very shortly. I have already answered that question.

Sri D. H. CHANDRASEKHARAIYA.—Will it be possible to publish the

result of the work done under the food production scheme once in three months for the information of the public?

Sri T. MARIAPPA.—We will try to publish in a very concise form the results of food production operations.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ರಾಗಿ ಮತ್ತು ಜೋಳಕ್ಕೆ ಬತ್ತವನ್ನು ಬದಲಾಗಿ ಕೊಡುತ್ತೇವೆಂದು ಹೇಳಿದಿರಿ. ಆ ರೀತಿಯಾಗಿ ಮಿರೆಟ್ಸ್ ಕೊಟ್ಟು ಅದಕ್ಕೆ ಬದಲು ಬತ್ತ ತೆಗೆದುಕೊಂಡಿರುವವರು ಎಷ್ಟು ಜನ ಇದ್ದಾರೆ?

Sri T. MARIAPPA.—I have no information just at present. I want notice.

ಶ್ರೀ ಎಚ್. ಸಿದ್ದವೀರಪ್ಪನವರು.—ಆ ರೀತಿಯಾಗಿ ತೆಗೆದುಕೊಳ್ಳುತ್ತಾರೆಂಬ ಅಂಶ ರೈತರಿಗೆ ಗೊತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಇಂತಿಂಥ ದವಸಕ್ಕೆ ಇಷ್ಟಿಷ್ಟು ಕೊಡಬೇಕೆಂದು ರೈತರುಗಳಿಗೆ ಗೊತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಕಿ ಸರಿಯಾಗಿ ಸಿಕ್ಕುತ್ತಿಲ್ಲವೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಗ್ರಾಮಾಂತರ ಪ್ರದೇಶಗಳಲ್ಲಿ ಡಿಪೋಗಳನ್ನಿಟ್ಟಿದ್ದೇವೆ. ಬಹುಶಃ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ ಅಷ್ಟು ಸಿಕ್ಕದಿರಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಪಟ್ಟಣಗಳಲ್ಲಿ ಅಕ್ಕಿ ಸಿಕ್ಕುವ ಹಾಗೆ ಗ್ರಾಮಾಂತರಗಳಲ್ಲಿ ಸರಿಯಾಗಿ ಸಿಕ್ಕದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಆ ಪ್ರಮಾಣದಲ್ಲಿ ಸಿಕ್ಕದಿರಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಗ್ರಾಮಾಂತರ ಪ್ರದೇಶಗಳು ಎಂದು ಹೇಳಿ ಒಂದು specific quota ವನ್ನು ಗೊತ್ತು ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—1944-45ನೆಯ basis ಮೇಲೆ ಎಷ್ಟು ಡಿಪೋಗಳಿದ್ದುವು, ಎಷ್ಟು ಜನಸಂಖ್ಯೆಯಿದೆಯೆಂಬುದನ್ನು ನೋಡಿಕೊಂಡು ಅಕ್ಕಿ ಕೊಟ್ಟಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಗ್ರಾಮಾಂತರ ಪ್ರದೇಶಗಳಿಗೂ ನಿರ್ದಿಷ್ಟವಾಗಿ ಒಂದು ಕೋಟಾ ಗೊತ್ತುಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ತಾಲ್ಲೂಕುಗಳಿಗೂ, ಹಳ್ಳಿಗಳಲ್ಲೂ ಇರತಕ್ಕ ಡಿಪೊಗಳಿಗೂ ಕೊಡುತ್ತಿದ್ದೇವೆ.

Sri H. M. CHANNABASAPPA (Mysore District—General).—Have the Government assessed the total number of partial producers and non-producers in the informal rationed areas?

Sri T. MARIAPPA.—Yes. We have got a list of surplus producers, non-producers and partial producers.

Sri H. M. CHANNABASAPPA.—What is the total number of partial producers and non-producers in formal ration areas?

Sri T. MARIAPPA.—I want notice.

Sri H. M. CHANNABASAPPA.—Have the Government provided sufficient ration for the non-producers and partial producers according to the figures they have?

Sri T. MARIAPPA.—To the best extent possible.

Sri H. M. CHANNABASAPPA.—What is the total number of cards issued?

Sri T. MARIAPPA.—I want notice.

Sri H. M. CHANNABASAPPA.—I am told that one of the steps to step-up food production was to distribute pamphlets on "Grow More Food" campaign from aeroplanes. Is it a fact?

Sri T. MARIAPPA.—The question is not clear.

Sri H. M. CHANNABASAPPA.—I have been informed that one of the methods adopted by the Government to step up the "Grow More Food" campaign was to distribute pamphlets from aeroplanes. Is it a fact?

Sri. T. MARIAPPA.—Yes; it was an educative propaganda; we wanted to rouse the consciousness of the people who were apathetic.

Sri H. M. CHANNABASAPPA.—How many pamphlets did you distribute? Where were they distributed and what was the cost involved?

Sri T. MARIAPPA.—All these things do not arise out of this question.

Sri H. C. DASAPPA (Minister for Finance and Industries).—

The Speaker was pleased to observe the other day that no one question should take such a long time.

Mr. SPEAKER.—Out of half-an-hour we have only five minutes more. We have not finished even two questions.

Sri H. M. CHANNABASAPPA.—Is the putting up of hand-posts on Grow More Food also one of the methods of growing more food?

Sri T. MARIAPPA.—Sir, he should not put it this way. It is much better it is put in a more elegant manner. Let people know that this work is done under the "Grow More Food" campaign. That is the reason why we are putting boards and the instructions of Government of India are to that effect.

Sri H. M. CHANNABASAPPA.—Is it in Engish or in Kannada?

Sri T. MARIAPPA.—It may be in English or Kannada.

Sri H. M. CHANNABASAPPA.—How many farmers know English?

Sri T. MARIAPPA.—Many farmers do not know Kannada also. But still we are doing it.

Sri H. M. CHANNABASAPPA.—Then what is the object of putting these boards when people are not in a position to read and understand what is mentioned there?

Mr. SPEAKER.—Next question. Question No. 67 Sri S. Rangaramiah.

Retired Officers of Mysore Government in employment in other Governments.

Q.—167. - **Sri S. RANGARAMIAH** (Mysore District—General).—

Will the Government be pleased to state;—

(*a*) how many retired officers of Mysore State have been employed and drawing salaries in the Government of India or other States in India;

(*b*) whether they have obtained permission from this Government before they took up appointment in the Governments of other States;

(*c*) Whether they are drawing their pensions also in Mysore State;

(*d*) whether they are aware that under the Service Regulations of Madras and Bombay, pensioners who are employed as salaried Government servants of other States are not entitled to draw their pensions in Madras or Bombay;

(*e*) whether they will be pleased to change the Mysore Service Regulations in respect of payment of pensions so as to bring it in conformity with the rules prevailing in the neighbouring States?

A.—**Sri H. C. DASAPPA** (Minister for Finance and Industries).—

(*a*) No information.

(*b*) No, nor is such a permission necessary.

(*c*) Yes; as they are officers retired from Mysore Government Service.

(*d*) Government are not aware.

(*e*) Does not arise in view of answer to (*d*).

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮೊದಲನೆಯ ಪ್ರಶ್ನೆಯಲ್ಲಿ. 'How many retired officers of Mysore State have been employed and drawing salaries in the Government of India or other States in India" ಎಂದು ಕೇಳಿರುವುದಕ್ಕೆ No information ಎಂದು ಹೇಳಿದ್ದೀರಿ. ಅಂದರೆ ಒಬ್ಬರೂ ಹೋಗಿ ಲ್ಲವೆಂದೇ ಇಲ್ಲವೇ ಅಥವಾ ತಮಗೆ information ತಿಸುವುದಕ್ಕೆ ಸಾಧ್ಯವಿಲ್ಲ ಎಂದೇ?

ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟೋ ಜನರು ಹೋಗಿದ್ದಾರೆ. ಸಂಖ್ಯೆ ಗೊತ್ತಿಲ್ಲವೆಂದು ಅರ್ಥ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಗೆ ಹೋಗಿರುವವರ ಪೈಕಿ ಯಾರ ವಿಷಯವೂ ಗೊತ್ತಿಲ್ಲ ವೆಂದು ಹೇಳಿರುವುದು ಸರಿಯಾಗುವುದಿಲ್ಲ ಅಲ್ಲವೇ?

Mr. SPEAKER.—That is not a supplementary question.

ಶ್ರೀ ಎಸ್. ರಂಗರಾಮಯ್ಯನವರು.—ತಮಗೆ ಗೊತ್ತಿರುವ ಹಾಗೆ ಎಷ್ಟು ಜನರು ಹೋಗಿದ್ದಾರೆ?

ಶ್ರೀ ಎಚ್. ಸಿ. ದಾಸಪ್ಪನವರು.—ನಣ್ಣ ಪುಟ್ಟ ಅಧಿಕಾರಿಗಳು, ದೊಡ್ಡವರು, ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಅಧಿಕಾರಿಗಳು—ಈ ಪ್ರಕಾರ ಎಷ್ಟೋ ಜನರು ಹೋಗಿರಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಕೆಲವರು ಹೈದರಾಬಾದು ಸಂಸ್ಥಾನಕ್ಕೆ ಹೋಗಿ, ಅಲ್ಲಿ ಅಧಿಕಾರ ದಲ್ಲಿರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿ. ದಾಸಪ್ಪನವರು —ಗೊತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅದ ರಂತೆಯೇ ಮಧ್ಯಪ್ರಾಂತಕ್ಕೆ ಹೋಗಿರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿ. ದಾಸಪ್ಪನವರು.—ಹೋಗಿರ ಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಪೆಷ್ಷನ್ ತೆಗೆದುಕೊಳ್ಳುತ್ತಿರುವುದು ಇಲ್ಲಿಂದಲೇ ಹಂಚಿಕೆ ಆಗುತ್ತಿದೆಯೇ? ಅಂದರೆ ಮೈಸೂರಿಗೇ ಬಂದು ತೆಗೆದುಕೊಳ್ಳುತ್ತಿದ್ದಾರೆಯೇ ಅಥವಾ ಅಲ್ಲಿಗೇ ಕಳುಹಿಸುತ್ತಿದ್ದೀರಾ?

ಶ್ರೀ ಎಚ್. ಸಿ. ದಾಸಪ್ಪನವರು.—ಆ ಏರ್ಪಾಡು ಏನೆಂಬುದನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಮದ್ರಾಸ್ ಮತ್ತು ಬೊಂಬಾಯಿನ ಸರ್ವಿಸ್ ರೆಗ್ಯುಲೇಷನ್ ಪ್ರಕಾರ, ಅಲ್ಲಿ ರಿಟೈರ್ ಆಗಿರುವವರು ಮತ್ತೆ ಕೆಲಸಕ್ಕೆ ಸೇರಿದಾಗ, ಅವರಿಗೆ ಹಿಂದಿನ ಸಂಬಳ ಕ್ಕಿಂತ ಹೆಚ್ಚಿಗೆಯಾಗಿ ಹಾಲಿ ಬರತಕ್ಕ ಸಂಬಳ ಮತ್ತು ಪೆಷ್ಷನ್ ಸೇರಿ ಹೆಚ್ಚಿಗೆ ಪೊಲಗಾದರೆ, ಅವರಿಗೆ ಪೂರ್ತಿ ಪೆಷ್ಷನ್ ಕೊಡುವುದಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಎಚ್. ಸಿ. ದಾಸಪ್ಪನವರು.—ಸರ್. ಎಂ. ವಿಶ್ವೇಶ್ವರಯ್ಯನವರು ಕೆಲಸ ಮಾಡುತ್ತಿದ್ದರು, ಅವರು ಎರಡು ಕಡೆಯಲ್ಲೂ ಪೆಷ್ಷನ್ ತೆಗೆದುಕೊಳ್ಳುತ್ತಿದ್ದರು. ಹಾಗೆಯೇ ಎಂ. ಎ. ಅಯ್ಯಂಗಾರ್‌ರವರೂ ಪೂರ್ತಿ ತೆಗೆದುಕೊಳ್ಳುತ್ತಿದ್ದರೆಂದು ಹೇಳಬಲ್ಲೆ.

ಶ್ರೀ ಎಸ್. ರಂಗರಾಮಯ್ಯನವರು.—ಮದ್ರಾಸ್ ಬೊಂಬಾಯಿನಲ್ಲಿರುವ ಸರ್ವಿಸ್ ರೆಗ್ಯುಲೇಷನ್‌ಗಳನ್ನು ತಾವು ನೋಡಿದ್ದೀರಾ?